# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **595** |
| ಉತ್ತರಿಸಬೇಕಾದ ದಿನಾಂಕ | : | **20-02-2024** |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಾಥಮಿಕ ಕೃಷಿ ಸಹಕಾರಿ ಬ್ಯಾಂಕ್, ಜಿಲ್ಲಾ ಸಹಕಾರಿ ಬ್ಯಾಂಕ್, ಹಾಗೂ ರಾಜ್ಯ ಅಪೆಕ್ಸ್ ಬ್ಯಾಂಕಿನಿಂದ ರೈತರು ಪಡೆದ ಸಾಲದ ಪ್ರಮಾಣ ಎಷ್ಟು, ಅದರಲ್ಲಿ ಅಲ್ಪಾವಧಿ ಮತ್ತು ದೀರ್ಘಾವಧಿ ಸಾಲವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯ ಅಪೆಕ್ಸ್ ಬ್ಯಾಂಕ್ ಹಾಗೂ ಜಿಲ್ಲಾ ಸಹಕಾರಿ ಬ್ಯಾಂಕ್‌ಗಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ರೈತರಿಗೆ ಕೃಷಿ ಸಾಲ ವಿತರಿಸುತ್ತಿದ್ದು, ದಿನಾಂಕ:01-04-2023 ರಿಂದ ದಿನಾಂಕ:31-01-2024 ರವರೆಗೆ ರೂ.18,170.22 ಕೋಟಿಗಳ ಕೃಷಿ ಸಾಲವನ್ನು 22,78,908 ರೈತರು ಪಡೆದಿರುತ್ತಾರೆ. ಇದರಲ್ಲಿ ಅಲ್ಪಾವಧಿ ಕೃಷಿ ಸಾಲ ರೂ.17,534.18 ಕೋಟಿಗಳಿದ್ದು, ದೀರ್ಘಾವಧಿ ಕೃಷಿ ಸಾಲ ರೂ.636.04 ಕೋಟಿಗಳಿರುತ್ತವೆ.<br>ಜಿಲ್ಲಾವಾರು ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಸಹಕಾರಿ ಬ್ಯಾಂಕಿನಿಂದ ಪಡೆದ ಸಾಲಕ್ಕೆ ಎಷ್ಟು ಲಕ್ಷದವರೆಗೆ ಶೂನ್ಯ ಬಡ್ಡಿದರ ಇದೆ ಮತ್ತು ನಂತರದ ಮೊತ್ತಕ್ಕೆ ವಿಧಿಸಲಾಗುವ ಬಡ್ಡಿ ಎಷ್ಟು; | ರೈತರು ಡಿಸಿಸಿ ಬ್ಯಾಂಕಿನ ಶಾಖೆಗಳು ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ರೂ.5.00 ಲಕ್ಷಗಳವರೆಗೆ ಪಡೆದ ಅಲ್ಪಾವಧಿ ಬೆಳೆ ಸಾಲಕ್ಕೆ ಶೂನ್ಯ ಬಡ್ಡಿದರ ಅನ್ವಯವಾಗುತ್ತದೆ. ನಂತರದ ಮೊತ್ತಕ್ಕೆ ಸಂಸ್ಥೆಗಳು ವಿಧಿಸುವ ಸಾಮಾನ್ಯ ಬಡ್ಡಿದರ ಅನ್ವಯವಾಗುತ್ತದೆ. ಈ ಬಡ್ಡಿದರವು ಸಂಬಂಧಿಸಿದ ಬ್ಯಾಂಕಿನ ಬಂಡವಾಳದ ವೆಚ್ಚ ಮತ್ತು ಆಡಳಿತ ವೆಚ್ಚವನ್ನು ಆಧರಿಸಿದ್ದು, ಬ್ಯಾಂಕಿನಿಂದ ಬ್ಯಾಂಕಿಗೆ ಸಾಮಾನ್ಯ ಬಡ್ಡಿದರ ಬೇರೆ ಬೇರೆ ಇರುತ್ತದೆ. |
| ಇ) | ಪ್ರಸಕ್ತ ಸಾಲಿನಲ್ಲಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; ಎಷ್ಟು ಹಣ ಖರ್ಚಾಗಿದೆ; ( ಜಿಲ್ಲಾವಾರು ಮಾಹಿತಿ ನೀಡುವುದು) | 2023-24ನೇ ಸಾಲಿನಲ್ಲಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಈ ಕೆಳಕಂಡ ಯೋಜನೆಗಳನ್ನು ಜಾರಿಗೊಳಿಸಿದ್ದು, ಈ ಯೋಜನೆಯಲ್ಲಿ ಬಿಡುಗಡೆಯಾದ ಮತ್ತು ಖರ್ಚಾದ ಅನುದಾನ ವಿವರ ಈ ಕೆಳಗಿನಂತಿರುತ್ತದೆ. |

| | | |
|---|---|---|
| | | 1. <u>**ಕೃಷಿ ಸಾಲದ ಮೇಲಿನ ಬಡ್ಡಿ ಸಹಾಯಧನ ಯೋಜನೆ:**</u><br><br>ಈ ಯೋಜನೆಯಲ್ಲಿ ಸಹಕಾರ ಸಂಘಗಳಲ್ಲಿ ಮರುಪಾವತಿ ಪ್ರಮಾಣವನ್ನು ಹೆಚ್ಚಿಸಲು 2023-24 ನೇ ಸಾಲಿಗೆ ರೂ.1138.20 ಕೋಟಿಗಳ ಆಯವ್ಯಯ ಅವಕಾಶ ಕಲ್ಪಿಸಿದ್ದು, ದಿನಾಂಕ:31-01-2024 ರವರೆಗೆ ಸರ್ಕಾರ ರೂ.989.60 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ಈ ಪೈಕಿ ರೂ.942.62 ಕೋಟಿಗಳ ಬಡ್ಡಿ ಸಹಾಯಧನವನ್ನು ರೈತರ ಪರವಾಗಿ ಸಹಕಾರ ಸಂಘಗಳಿಗೆ ಬಿಡುಗಡೆ ಮಾಡಲು ವೆಚ್ಚ ಮಾಡಲಾಗಿದೆ.<br><br>2. <u>**ಸ್ವಸಹಾಯ ಗುಂಪುಗಳ ಸಾಲದ ಮೇಲಿನ ಬಡ್ಡಿ ಸಹಾಯಧನ ಯೋಜನೆ:**</u><br><br>ಈ ಯೋಜನೆಯಲ್ಲಿ ಸಹಕಾರ ಸಂಘಗಳಲ್ಲಿ ಮರುಪಾವತಿ ಪ್ರಮಾಣವನ್ನು ಹೆಚ್ಚಿಸಲು 2023-24 ನೇ ಸಾಲಿಗೆ ರೂ.99.00 ಕೋಟಿಗಳ ಆಯವ್ಯಯ ಅವಕಾಶ ಕಲ್ಪಿಸಿದ್ದು, ದಿನಾಂಕ:31-01-2024 ರವರೆಗೆ ಸರ್ಕಾರ ರೂ.82.47 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ಈ ಪೈಕಿ ರೂ.49.50 ಕೋಟಿ ಬಡ್ಡಿ ಸಹಾಯಧನವನ್ನು ಸ್ವಸಹಾಯ ಗುಂಪುಗಳ ಪರವಾಗಿ ಸಹಕಾರ ಸಂಘಗಳಿಗೆ ಬಿಡುಗಡೆ ಮಾಡಲಾಗಿದೆ.<br>ಜಿಲ್ಲಾವಾರು ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.<br><br>3. <u>**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಗಣಕೀಕರಣ ಯೋಜನೆ:**</u><br>ಈ ಯೋಜನೆಯಲ್ಲಿ ಕೇಂದ್ರ ಸರ್ಕಾರ ರೂ.40.25ಕೋಟಿ ಮತ್ತು ರಾಜ್ಯ ಸರ್ಕಾರ ರೂ.26.84 ಕೋಟಿಗಳು ಸೇರಿದಂತೆ ಒಟ್ಟು ರೂ.67.09 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ಈ ಮೊತ್ತವನ್ನು ವೆಚ್ಚ ಮಾಡಲು ಬಾಕಿ ಇರುತ್ತದೆ. ಪ್ಯಾಕ್ಸ್‌ಗಳಿಗೆ ಹಾರ್ಡ್‌ವೇರ್ ಉಪಕರಣಗಳ ಸರಬರಾಜು ಬಹುತೇಕ ಪೂರ್ಣಗೊಂಡಿದ್ದು, ಶೀಘ್ರದಲ್ಲಿ ಈ ಮೊತ್ತವನ್ನು ವೆಚ್ಚ ಮಾಡಲಾಗುವುದು. |

| | | |
|---|---|---|
| ಈ) | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ ಮತ್ತು ಇದರ ಅಧೀನದಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಯಾವ ಯಾವ ರೀತಿಯ ಸಾಲಗಳನ್ನು ರೈತರಿಗೆ ವಿತರಿಸಲಾಗುತ್ತಿದೆ; ಈ ಸಾಲಗಳನ್ನು ನೀಡಲು ಅನುಸರಿಸುತ್ತಿರುವ ಮಾನದಂಡಗಳೇನು; ಸಾಲ ವಿತರಣೆಯಲ್ಲಿ ಆಗುತ್ತಿರುವ ತಾರತಮ್ಯ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ರೈತರಿಗೆ ಶೂನ್ಯ ಬಡ್ಡಿದರದಲ್ಲಿ ರೂ.5.00 ಲಕ್ಷಗಳವರಗೆ ಅಲ್ಪಾವಧಿ ಕೃಷಿ ಸಾಲ ಮತ್ತು ಶೇ.3 ರ ಬಡ್ಡಿದರದಲ್ಲಿ ರೂ.15.00 ಲಕ್ಷಗಳ ವರಗೆ ಮಧ್ಯಮಾವಧಿ/ದೀರ್ಘಾವಧಿ ಕೃಷಿ ಸಾಲ ವಿತರಣೆ ಮಾಡಲಾಗುತ್ತಿದೆ.<br><br>ಸಾಲ ವಿತರಿಸಲು ಸಹಕಾರ ಸಂಸ್ಥೆಗಳು ಅನುಸರಿಸುತ್ತಿರುವ ಮಾನದಂಡಗಳು ಈ ಕೆಳಗಿನಂತಿರುತ್ತವೆ.<br><br>1) ರೈತನು ಸಂಘಕ್ಕೆ ಸಾಲ ಮತ್ತು ಸದಸ್ಯತ್ವಕ್ಕಾಗಿ ಅರ್ಜಿ ಸಲ್ಲಿಸಬೇಕು.<br><br>2) ರೈತನ ಭೂಮಿ ಅಥವಾ ವಾಸ ಸ್ಥಳ ಸಂಘದ ವ್ಯಾಪ್ತಿಯಲ್ಲಿರಬೇಕು.<br><br>3) ರೈತನು ಸಾಲ ಪಡೆಯಲು ನೀಡುವ ಭೂ ದಾಖಲೆಗಳಲ್ಲಿ ಇತರೆ ಯಾವುದೇ ಬ್ಯಾಂಕಿನಿಂದ ಸಾಲ ಪಡೆದಿರಬಾರದು.<br><br>4) ಬೆಳೆ ಸಾಲಕ್ಕಾಗಿ ರೈತನು ಹೊಂದಿರುವ ಭೂಹಿಡುವಳಿಗೆ ಮತ್ತು ಬೆಳೆಯುವ ಬೆಳೆಗೆ, ರಾಜ್ಯ ತಾಂತ್ರಿಕ ಸಲಹಾ ಸಮಿತಿ ಪ್ರತಿ ಬೆಳೆಗೆ ನಿಗದಿ ಪಡಿಸಿದ ಸ್ಕೇಲ್ ಆಫ್ ಫೈನಾನ್ಸ್ ಪ್ರಕಾರ ಬೆಳೆ ಸಾಲದ ಗರಿಷ್ಠ ಮಿತಿಯಾದ ಕ್ರಮಿಕ ಪತ್ತಿನ ಮಿತಿ (NCL) ಗೆ ಸಂಬಂಧಿಸಿದ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಿಂದ ಅನುಮೋದನೆ ಪಡೆದಿರತಕ್ಕದ್ದು.<br><br>5) ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲಕ್ಕಾಗಿ ಸಾಲದ ಭದ್ರತೆಗಾಗಿ ಒದಗಿಸುವ ದಾಖಲೆಗಳೊಂದಿಗೆ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.<br><br>6) ಇದರ ಆಧಾರದ ಮೇಲೆ ಜಿಲ್ಲಾ ಸಹಕಾರ ಬ್ಯಾಂಕುಗಳು ನಬಾರ್ಡ್‌ನಿಂದ ದೊರೆಯುವ ಪುನರ್ಧನ ಮತ್ತು ತಮ್ಮ ಬಂಡವಾಳದ ಲಭ್ಯತೆ ಆಧರಿಸಿ ರೈತರಿಗೆ ಸಾಲ ಮಂಜೂರು ಮಾಡಲಾಗುತ್ತದೆ. |

| | | |
|---|---|---|
| | | ಸಹಕಾರ ಸಂಸ್ಥೆಗಳು ಸಾಲ ವಿತರಣೆಯಲ್ಲಿ ತಾರತಮ್ಯ ಮಾಡದಿರಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>1. 2023–24ನೇ ಸಾಲಿಗೆ ಸಹಕಾರ ಸಂಸ್ಥೆಗಳ ಮೂಲಕ 34.40 ಲಕ್ಷ ರೈತರಿಗೆ ರೂ.23,000 ಕೋಟಿಗಳ ಬೆಳೆ ಸಾಲವನ್ನು ಶೂನ್ಯ ಬಡ್ಡಿದರದಲ್ಲಿ ವಿತರಿಸಲು ಹಾಗೂ 0.64 ಲಕ್ಷ ರೈತರಿಗೆ ರೂ.1700.0 ಕೋಟಿಗಳ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲವನ್ನು ಶೇ.3 ರ ಬಡ್ಡಿದರದಲ್ಲಿ ವಿತರಿಸಲು ಗುರಿ ಹೊಂದಿದ್ದು, ಪ್ರತೀ ಡಿಸಿಸಿ ಬ್ಯಾಂಕುಗಳಿಗೆ ಪ್ರತ್ಯೇಕ ಗುರಿ ನಿಗದಿಪಡಿಸಲಾಗಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಶೇ.24.10 ರಷ್ಟು ಪ್ರಮಾಣದ ಸಾಲ ವಿತರಿಸಲು ಸಹಕಾರ ಸಂಸ್ಥೆಗಳಿಗೆ ತಿಳಿಸಲಾಗಿದೆ.<br><br>2. ಈ ಗುರಿಯ ಆಧಾರದ ಮೇಲೆ ಡಿಸಿಸಿ ಬ್ಯಾಂಕುಗಳು ಯಾವುದೇ ತಾಲ್ಲೂಕುಗಳಿಗೆ/ವಿಧಾನ ಸಭಾ ಕ್ಷೇತ್ರಗಳಿಗೆ ತಾರತಮ್ಯ ಮಾಡದೇ ಜಿಲ್ಲಾವಾರು, ಮಾಹೆವಾರು, ರೈತರ ವಿಧ ಹಾಗೂ ವರ್ಗಾವಾರು (ಜಿಲ್ಲೆಯಲ್ಲಿ ವಿವಿಧ ವರ್ಗಗಳ ರೈತರ ಪ್ರಮಾಣದ ಆಧಾರವಾಗಿ ಹೊಸ ಸದಸ್ಯರಿಗೆ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಮತ್ತು ಅಲ್ಪ ಸಂಖ್ಯಾತರಿಗೆ (ರೈತರ ಸಂಖ್ಯೆ ಮತ್ತು ಸಾಲದ ಮೊತ್ತ) ಪ್ರತ್ಯೇಕವಾಗಿ ಸಾಲದ ಗುರಿಯನ್ನು ನಿಗದಿಪಡಿಸಿ ಅದರನ್ವಯ ಸಾಲ ವಿತರಿಸಲು ಸಹಕಾರ ಸಂಘಗಳಿಗೆ ತಿಳಿಸಲಾಗಿದೆ.<br><br>ಸರ್ಕಾರದ ಆದೇಶವನ್ನು ಸೂಚನಾ ಫಲಕದಲ್ಲಿ ಪ್ರಕಟಿಸುವುದು ಹಾಗೂ ಎಲ್ಲ ವರ್ಗದ ಸದಸ್ಯರಿಗೆ ಮುಖ್ಯವಾಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತ ಸದಸ್ಯರಿಗೆ ಸಾಲದ ಅರ್ಜಿಗಳನ್ನು ಸುಲಭವಾಗಿ ದೊರೆಯುವಂತೆ ಕ್ರಮ ಕೈಗೊಳ್ಳತಕ್ಕದ್ದು ಮತ್ತು ಸಾಲದ ಅರ್ಜಿಗಳನ್ನು ಸ್ವೀಕರಿಸಿದ ಮತ್ತು ಸಾಲ ಮಂಜೂರಾದ ವಿವರಗಳನ್ನು ನಮೂದಿಸಲು ಪ್ರತ್ಯೇಕ ರಿಜಿಸ್ಟರ್‌ನ್ನು ಸಂಘಗಳ/ಬ್ಯಾಂಕುಗಳ ಮಟ್ಟದಲ್ಲಿ ನಿರ್ವಹಿಸಲು ಸಹಕಾರ ಸಂಸ್ಥೆಗಳ ನಿಬಂಧಕರಿಂದ ಸೂಚನೆ ನೀಡಲಾಗಿದೆ. |

| | | |
|---|---|---|
| ಉ) | ಯಶಸ್ವಿನಿ ಯೋಜನೆಯ ಮರು ಜಾರಿಯಾದಾಗಿನಿಂದ ಇಲ್ಲಿಯವರೆಗೆ ನೋಂದಣಿಯಾಗಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | 2022–23ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆಗೆ ಸದಸ್ಯತ್ವ ನೋಂದಣಿ ಪ್ರಕ್ರಿಯೆ ದಿನಾಂಕ: 01–11–2022 ರಿಂದ ಪ್ರಾರಂಭಿಸಿದ್ದು ದಿನಾಂಕ: 31–03–2023 ರಂದು ಅಂತ್ಯಗೊಂಡಿರುತ್ತದೆ. 2022-23ನೇ ಸಾಲಿನಲ್ಲಿ 48.24 ಲಕ್ಷ ಫಲಾನುಭವಿಗಳು ನೋಂದಾಯಿಸಿಕೊಂಡಿದ್ದಾರೆ.<br><br>ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ–3ರಲ್ಲಿ** ನೀಡಲಾಗಿದೆ.<br><br>2023–24ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆಗೆ ಸದಸ್ಯತ್ವ ನೋಂದಣಿ ಪ್ರಕ್ರಿಯೆ ದಿನಾಂಕ: 01–01–2024 ರಿಂದ ಪ್ರಾರಂಭಿಸಲಾಗಿದ್ದು, ದಿನಾಂಕ: 28–02–2024 ರವರೆಗೆ ನೋಂದಣಿ ಅವಧಿ ಇದ್ದು, ನೋಂದಣಿ ಕಾರ್ಯ ಪ್ರಗತಿಯಲ್ಲಿರುತ್ತದೆ. |

**ಸಂಖ್ಯೆ: ಸಿಒ 32 ಸಿಎಲ್‌ಎಸ್ 2024**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**

ಅನುಬಂಧ-1

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಸುನಿಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 595 ಕ್ಕೆ ಮಾಹಿತಿ

ರಾಜ್ಯ ಅಪೆಕ್ಸ್ ಬ್ಯಾಂಕ್ ಹಾಗೂ ಜಿಲ್ಲಾ ಸಹಕಾರಿ ಬ್ಯಾಂಕ್‌ಗಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ರೈತರಿಗೆ ದಿ.1-4-2023 ರಿಂದ ದಿ.31-1-2024 ರ ವರೆಗೆ ವಿತರಿಸಿದ ಕೃಷಿ ಸಾಲ (ರೂ.ಕೋಟಿಗಳಲ್ಲಿ)

| ಕ್ರ. ಸಂ | ಜಿಲ್ಲೆಯ ಹೆಸರು | ಅಲ್ಪಾವಧಿ ಕೃಷಿ ಸಾಲ | | ಮಧ್ಯಮಾವಧಿ/ದೀರ್ಘಾವಧಿ ಕೃಷಿ ಸಾಲ | | ಒಟ್ಟು ಕೃಷಿ ಸಾಲ | |
|---|---|---|---|---|---|---|---|
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 24 | ಮೈಸೂರು | 58158 | 725.36 | 1126 | 28.88 | 59284 | 754.24 |
| 25 | ಚಾಮರಾಜನಗರ | 20942 | 230.03 | 89 | 2.99 | 21031 | 233.02 |
| 23 | ಮಂಡ್ಯ | 107791 | 712.37 | 891 | 13.60 | 108682 | 725.97 |
| 18 | ಹಾಸನ | 127243 | 823.48 | 95 | 6.92 | 127338 | 830.40 |
| 10 | ಚಿಕ್ಕಮಗಳೂರು | 49548 | 806.86 | 175 | 12.65 | 49723 | 819.51 |
| 20 | ಕೊಡಗು | 35791 | 709.24 | 1353 | 72.75 | 37144 | 781.99 |
| 28 | ಮಂಗಳೂರು | 80012 | 1515.28 | 3215 | 84.96 | 83227 | 1600.24 |
| 29 | ಉಡುಪಿ | 29193 | 459.07 | 775 | 14.52 | 29968 | 473.59 |
| 5 | ಬೆಳಗಾವಿ | 349555 | 2193.86 | 219 | 11.69 | 349774 | 2205.55 |
| 9 | ವಿಜಯಪೂರ | 165420 | 1210.91 | 1067 | 31.10 | 166487 | 1242.01 |
| 1 | ಬಾಗಲಕೋಟ | 243295 | 1177.02 | 891 | 52.05 | 244186 | 1229.07 |
| 13 | ಧಾರವಾಡ | 21968 | 166.64 | 157 | 8.46 | 22125 | 175.10 |
| 14 | ಹಾವೇರಿ | 30492 | 189.54 | 320 | 17.02 | 30812 | 206.56 |
| 15 | ಗದಗ | 24468 | 148.63 | 240 | 12.98 | 24708 | 161.61 |
| 19 | ಉತ್ತರ ಕನ್ನಡ | 87881 | 929.61 | 4535 | 105.19 | 92416 | 1034.80 |
| 16 | ಕಲಬುರಗಿ | 84339 | 375.44 | 0 | 0.00 | 84339 | 375.44 |
| 17 | ಯಾದಗೀರ | 25056 | 102.26 | 0 | 0.00 | 25056 | 102.26 |
| 8 | ಬೀದರ | 111489 | 513.25 | 1168 | 15.00 | 112657 | 528.25 |
| 6 | ಬಳ್ಳಾರಿ | 41954 | 384.14 | 114 | 8.09 | 42068 | 392.23 |
| 7 | ವಿಜಯನಗರ | 72674 | 658.91 | 91 | 6.36 | 72765 | 665.27 |
| 26 | ರಾಯಚೂರು | 77189 | 346 | 95 | 5.93 | 77284 | 351.93 |
| 27 | ಕೊಪ್ಪಳ | 38554 | 208.69 | 40 | 2.22 | 38594 | 210.91 |
| 2 | ಬೆಂಗಳೂರು ನಗರ | 7896 | 55.95 | 6 | 0.63 | 7902 | 56.58 |
| 3 | ಬೆಂ.ಗ್ರಾಮಾಮತರ | 23709 | 161.85 | 135 | 4.00 | 23844 | 165.85 |
| 4 | ರಾಮನಗರ | 53900 | 365.14 | 536 | 18.17 | 54436 | 383.31 |
| 31 | ತುಮಕೂರು | 95575 | 461.80 | 186 | 16.98 | 95761 | 478.78 |
| 11 | ಚಿತ್ರದುರ್ಗ | 45792 | 386.54 | 578 | 36.78 | 46370 | 423.32 |
| 21 | ಕೋಲಾರ | 14985 | 188.23 | 404 | 7.35 | 15389 | 195.58 |
| 22 | ಚಿಕ್ಕಬಳ್ಳಾಪುರ | 18972 | 228.58 | 45 | 3.28 | 19017 | 231.86 |
| 12 | ದಾವಣಗೆರೆ | 67237 | 511.08 | 340 | 24.77 | 67577 | 535.85 |
| 30 | ಶಿವಮೊಗ್ಗ | 48892 | 588.42 | 52 | 10.71 | 48944 | 599.13 |
| | **MIÄÖ** | 2259970 | 17534.18 | 18938 | 636.04 | 2278908 | 18170.22 |

ಅನುಬಂಧ-2

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಸುನಿಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 595 ಕ್ಕೆ ಮಾಹಿತಿ.

ಸರ್ಕಾರದ ಯೋಜನೆಗಳಲ್ಲಿ ದಿ.1-4-2023 ರಿಂದ ದಿ.31-1-2024 ರ ವರೆಗೆ ಖರ್ಚಾದ ಅನುದಾನದ ವಿವರ (ರೂ.ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆಯ ಹೆಸರು | ಕೃಷಿ ಸಾಲದ ಮೇಲಿನ ಬಡ್ಡಿ ಸಹಾಯಧನ ಯೋಜನೆ | ಸ್ವಸಹಾಯ ಗುಂಪುಗಳ ಸಾಲದ ಮೇಲಿನ ಬಡ್ಡಿ ಸಹಾಯಧನ ಯೋಜನೆ |
|---|---|---|---|
| 1 | bagalkot | 6145.07 | 11.17 |
| 2 | bangalore | 8722.88 | 19.78 |
| 3 | bangalore rural | 738.31 | 25.04 |
| 4 | belgaum | 8306.74 | 116.30 |
| 5 | bellary | 3896.53 | 51.61 |
| 6 | bidar | 3794.58 | 1011.75 |
| 7 | bijapur | 5772.96 | 0.00 |
| 8 | Chamarajnagar | 986.28 | 0.00 |
| 9 | Chikkamagalore | 2821.09 | 0.50 |
| 10 | chitradurga | 2266.60 | 1.32 |
| 11 | Dakshina Kannada | 10583.56 | 449.90 |
| 12 | davanagere | 2815.27 | 1.50 |
| 13 | dharwad | 788.93 | 30.04 |
| 14 | gadag | 696.90 | 35.85 |
| 15 | gulbarga | 1442.07 | 0.00 |
| 16 | Hassan | 4611.30 | 159.90 |
| 17 | haveri | 793.51 | 8.98 |
| 18 | kodagu | 2381.07 | 18.23 |
| 19 | kolar & Chikkaballapur | 1534.06 | 1058.75 |
| 20 | Koppal | 1008.59 | 69.25 |
| 21 | mandya | 4022.18 | 493.24 |
| 22 | Mysore | 2988.29 | 0.90 |
| 23 | north canara | 4393.74 | 147.09 |
| 24 | raichur | 2124.82 | 18.51 |
| 25 | ramanagara | 1788.62 | 61.65 |
| 26 | shimoga | 2938.91 | 249.97 |
| 27 | tumkur | 2784.77 | 3.96 |
| 28 | Udupi | 2580.49 | 904.81 |
| 29 | yadagiri | 534.29 | 0.00 |
| | Grand Total | 94262.40 | 4950.00 |

# ಅನುಬಂಧ - 3

## 2022-23 Yeshasvini members details

| Sl No | District | Total Members |
|---|---|---|
| 1 | Bangalore Zone-1 | 68785 |
| 2 | Bangalore Zone-2 | 38628 |
| 3 | Bangalore Zone-3 | 57029 |
| 4 | Bangalore Zone-4 | 73873 |
| 5 | Bangalore Rural | 111744 |
| 6 | Ramanagara | 157875 |
| 7 | Tumkur | 301502 |
| 8 | Kolar | 93523 |
| 9 | Chikkaballapur | 76389 |
| 10 | Chitradurga | 121450 |
| 11 | Davangere | 148395 |
| 12 | Shimoga | 235098 |
| 13 | Mysore | 341017 |
| 14 | Chamarajanagar | 101976 |
| 15 | Mandya | 326119 |
| 16 | Hassan | 194043 |
| 17 | Chikkmagalure | 139661 |
| 18 | Kodagu | 80512 |
| 19 | Dakshin Kannada | 258101 |
| 20 | Udupi | 322188 |
| 21 | Belgaum | 257359 |
| 22 | Vijayapura | 115738 |
| 23 | Bagalkot | 204456 |
| 24 | Dharwad | 85130 |
| 25 | Gadag | 62128 |
| 26 | Haveri | 102409 |
| 27 | Uttara Kannada | 183283 |
| 28 | Bellary | 61347 |
| 29 | Bidar | 122398 |
| 30 | Kalburgi | 68500 |
| 31 | Koppal | 79823 |
| 32 | Raichur | 114075 |
| 33 | Yadgir | 19011 |
| 34 | Vijayanagar | 101104 |
| Total | | **4824669** |